**<u>ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.148/2020</u>**

ಸಾಕ್ಷಿದಾರರ ಹೆಸರು : ಎಂ. ಕೋಟೆಪ್ಪ

ತಂದೆಯ ಹೆಸರು : ಲೇಟ್ ರುದ್ರಪ್ಪ

ವಯಸ್ಸು : 42 ವರ್ಷ

ಉದ್ಯೋಗ : ಗ್ರಾಮ ಲೆಕ್ಕಾಧಿಕಾರಿ, ಬಾಡಾ ವೃತ್ತ

ವಾಸ ಸ್ಥಳ : ದಾವಣಗೆರೆ

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 2

ದಿ: 17-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ಬಾಡಾದಲ್ಲಿ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ 2020 ರಿಂದ ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿದ್ದೇನೆ. ಮೇ 2020 ರಲ್ಲಿ ನಾನು ಬಾಡಾ ವೃತ್ತ ಮತ್ತು ಪ್ರಭಾರ ಅಣಬೇರು ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ದಿಃ 26-05-2020 ರಂದು ದಾವಣಗೆರೆಯ ತಹಶೀಲ್ದಾರರವರ ಆದೇಶದ ಮೇರೆಗೆ ಮಾಯಕೊಂಡದಲ್ಲಿ ಒಂದು ಪ್ರಕರಣ ದಾಖಲಾಗಿರುತ್ತದೆ. ಆದ್ದರಿಂದ ಪಂಚನಾಮೆಗೆ ಪಂಚರಾಗಿ ಸಹಕರಿಸಲು ಮೇಲಾಧಿಕಾರಿಗಳು ಆದೇಶ ಮಾಡಿರುತ್ತಾರೆ. ಆ ಪ್ರಕಾರ ನಾನು ಮತ್ತು ಚಾಸಾ-3 ರವರು ದಿಃ 26-05-2020 ರಂದು ಶಂಕರನಹಳ್ಳಿ ಗ್ರಾಮದ ಸರ್ವೇ ನಂ.25/3 ರ ಕಲ್ಲು ಕ್ವಾರೆ ಬಳಿ ಹೋಗಿದ್ದೆವು. ಅಲ್ಲಿ ಹೋದಾಗ ತನಿಖಾಧಿಕಾರಿಗಳಾದ ಚಾಸಾ-33,

ಗುರುಬಸವರಾಜ, ದೂರುದಾರರಾದ ಚಾಸಾ-1 ರವರು ಇದ್ದರು. ಅಲ್ಲಿ ಚಾಸಾ-1 ರವರು ದಿಃ 25-05-2020 ರಂದು ಶಂಕರನಹಳ್ಳಿ ಅಜ್ಜಿ ಮನೆಗೆ ಕಿರಣ ಕುಮಾರ ಮತ್ತು ಆತನ ಮಗ ಸೃಜನ್ ದಾವಣಗೆರೆಯಿಂದ ಬಂದಿದ್ದರು ಅಂತ ಹೇಳಿದರು. ಕಿರಣ ಕುಮಾರ ಮತ್ತು ಆತನ ಮಗ ಸೃಜನ್ ರವರು ಅಜ್ಜಿ ಊರಿನಲ್ಲಿ ಬಹಿರ್ದೆಸೆಗೆ ಅಥವಾ ಫೋಟೋ ತೆಗೆಯಲು ಅಥವಾ ನೀರು ಕುಡಿಯಲು ಆಕಸ್ಮಿಕವಾಗಿ ಊರಿನ ಪಕ್ಕದಲ್ಲಿರುವ 100 ಮೀ. ಅಂತರದಲ್ಲಿರುವ ರಸ್ತೆಯ ಪಕ್ಕದಲ್ಲಿರುವ ಆಳು ಬಿದ್ದ ಕಲ್ಲು ಕ್ವಾರಿ ಹೊಂಡದ ಹತ್ತಿರ ಹೋಗಿ ಭಾವಚಿತ್ರ ತೆಗೆಯಲು ಹೋದಾಗ ಅವರು ಕಾಲು ಜಾರಿ ಕಲ್ಲು ಕ್ವಾರಿಯಲ್ಲಿರುವಂತಹ ಆಳವಾದ ನೀರು ಇರುವ ಹೊಂಡದಲ್ಲಿ ಬಿದ್ದಿರುತ್ತಾರೆ, ಅದರಿಂದ ಅವರು ಮೃತಪಟ್ಟಿರುತ್ತಾರೆ ಅಂತ ತಿಳಿಸಿದರು. ಆ ಜಾಗವನ್ನು ಅವರು ತೋರಿಸಿಕೊಟ್ಟಿದ್ದು, ಅಲ್ಲಿ ಮಧ್ಯಾಹ್ನ 12.00 ರಿಂದ 1.00 ಗಂಟೆ ಅವಧಿಯಲ್ಲಿ ಮಹಜರ ಮಾಡಿರುತ್ತಾರೆ. ಆ ಮಹಜರನ್ನು ಈಗ ನೋಡುತ್ತಿದ್ದು, ಮಹಜರನ್ನು ಈಗಾಗಲೇ ನಿಪಿ-4 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಅಂತ ಗುರುತಿಸಲಾಯಿತು. ಆ ಸಂದರ್ಭದಲ್ಲಿ ನಾನು ಈಗ ನೋಡಿದ ನಿಪಿ-5 ರ ಫೋಟೋವನ್ನು ತೆಗೆಯಲಾಯಿತು. ಮಹಜರ ಮಾಡುವ ಕಾಲಕ್ಕೆ ನೋಟಿಸ್ಸಿಗೆ ಸಹಿ ಮಾಡಿಸಿಕೊಂಡಿದ್ದರು. ಆ ನೋಟಿಸ್ಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಅಂತ, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಅಂತ ಗುರುತಿಸಲಾಯಿತು.

2. ಸರ್ವೇ ನಂಬರ 25/3 ಲಲಿತಮ್ಮ ಕೋಂ ಜಯಪ್ಪರವರ ಹೆಸರಿನಲ್ಲಿದ್ದು, ಅದು 1 ಎಕರೆ ಇರುತ್ತದೆ. ಅದು ರಸ್ತೆಯ ಪಕ್ಕದಲ್ಲಿದ್ದು ಯಾವುದೇ ತಡಗೋಡೆಗಳನ್ನು ಹಾಕಿರಲಿಲ್ಲ, ತಂತಿ ಬೇಲಿ ಹಾಕಿರಲಿಲ್ಲ ಮತ್ತು ಎಚ್ಚರಿಕೆ ಬೋರ್ಡ್‌ನ್ನು ಸಹ ಹಾಕಿರಲಿಲ್ಲ. ಎಚ್ಚರಿಕೆ ಬೋರ್ಡ್ ಹಾಕಿದ್ದಲ್ಲಿ ಮೃತರ ಜೀವ ಉಳಿಯುತ್ತಿತ್ತು. ಆ ಊರಿನಲ್ಲಿ ವಿಚಾರಣೆ ಮಾಡಿದಾಗ ಅಲ್ಲಿಯ ಗ್ರಾಮಸ್ಥರು ಆ ಕಲ್ಲುಕ್ವಾರಿಯ ಹೊಂಡಾದಲ್ಲಿ ನೀರು ಇದ್ದು ಸುಮಾರು 10-20 ದನ ಕರುಗಳು ನೀರು ಕುಡಿಯಲು ಹೋಗಿ ಬಿದ್ದು ಸತ್ತಿರುವುದಾಗಿ ವಿಷಯ ತಿಳಿಸಿದರು. ಅದರ ಅಳತೆ 120 ಮೀ. ಉದ್ದ, 60-70 ಮೀ. ಅಗಲ ಸುಮಾರು

30 ಅಡಿ ಆಳವಾಗಿ ಇದ್ದು ನೀರು ತುಂಬಿತ್ತು. ಆ ಕಲ್ಲುಕ್ವಾರಿ ಲಲಿತಮ್ಮರವರ ಹೆಸರಿನಲ್ಲಿದ್ದು, ಮತ್ತು ಅದನ್ನು ಅವರ ಗಂಡ ಜಯಪ್ಪರವರು ನಡೆಸುತ್ತಿದ್ದರು. ಜಯಪ್ಪರವರು ತೀರಿಕೊಂಡ ನಂತರ ಅವರ ಮಗ ಹೇಮರಾಜರವರು ನಡೆಸುತ್ತಿದ್ದರು ಅಂತ ವಿಷಯ ಗೊತ್ತಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಈ ಹಂತದಲ್ಲಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.